**ದಿನಾಂಕಃ 12.11.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ 2 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

1. ನಾನು 3 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಚಿತ್ತಮ್ಮನವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ಚಿತ್ತಮ್ಮನವರು ನನ್ನ ಸಂಬಂಧಿಕರಲ್ಲ ಆದರೆ ನಮ್ಮ ಕುಲಸ್ಥರು. ನಾನು ಮತ್ತು ಚಿತ್ತಮ್ಮನವರು ಚಿತ್ರದೇವರಹಟ್ಟಿಯಲ್ಲಿ ವಾಸವಾಗಿರುತ್ತೇವೆ. ವಾದಿ ಚಿತ್ತಮ್ಮ ನನಗೆ ಸುಮಾರು 50 ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿ ಚಿತ್ತಮ್ಮನವರು ದಾರಿ ವಿಚಾರಕ್ಕೆ ಈ ದಾವೆ ಹೂಡಿರುತ್ತಾರೆ. ಈ ದಾವೆಯಲ್ಲಿ ಬೇರೆ ಯಾರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವಕೀಲರಿಗಾಗಲೀ ಅಥವಾ ವಾದಿಗಾಗಲೀ ಯಾವುದೇ ಮಾಹಿತಿ ನೀಡಿರುವುದಿಲ್ಲ.

2. ಚಿತ್ತಪ್ಪನ ಮಗ ಕರಿಯಪ್ಪ ಇವರನ್ನು ನಮ್ಮ ಊರಿನಲ್ಲಿ ನೋಡಿರುವುದಿಲ್ಲ. ಚಿತ್ತಪ್ಪ @ ತಾಳೇ ಕರಿಯಜ್ಜನ ಚಿತ್ತಪ್ಪ ಇವರನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತಿಲ್ಲ. ವಾದಿ ಚಿತ್ತಮ್ಮನವರು ನನಗೆ ಸಾಕ್ಷ್ಯ ಹೇಳುವಂತೆ ಕೇಳಿಕೊಂಡಿರುತ್ತಾರೆ. ನನಗೆ ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರಿದು ದಾರಿ ವಿಚಾರಕ್ಕೆ ಕೇಸು ಹಾಕಿದ್ದಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.